## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕೊಳ್ಳೇಗಾಲ

**ಸಿ ಸಿ ಸಂಖ್ಯೆ 204 /2020**

ಚಾಸಾ 8 ಫ್ರಾಸಾ 3

ಸಾಕ್ಷಿಯ ಹೆಸರು : ಲೋಕೇಶ್

ತಂದೆಯ ಹೆಸರು : ಸಿದ್ದಯ್ಯ

ವಯಸ್ಸು : 47 ವರ್ಷ

ಉದ್ಯೋಗ : ಗ್ರಾಮ ಲೆಕ್ಕಾಧಿಕಾರಿಗಳ ಸಹಾಯಕ

ವಾಸ ಸ್ಥಳ : ಮಧುವನಹಳ್ಳಿ

ದಿನಾಂಕ 04.12.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ – ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ವಾಹನ ಅಮಾನತ್ತು ಪಂಚನಾಮೆ ಆಗಿದ್ದು ಅದನ್ನು ನಿಪಿಃ 3 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 3(ಎ) ಎಂದು ಗುರುತಿಸಲಾಯಿತು. ಈಗ್ಗೆ ಎರಡು ವರ್ಷಗಳ ಹಿಂದೆ ಮಧುವನಹಳ್ಳಿಯ ಬೈಪಾಸ್ ರಸ್ತೆಯಲ್ಲಿ ಜಮೀನು ಸಮೀಕ್ಷೆ ಮಾಡುತ್ತಿದ್ದೆ. ಆ ಸಮಯದಲ್ಲಿ ಪೊಲೀಸರ ಮನವಿಯ ಮೇರೆಗೆ ನಿಪಿ–3 ದಾಖಲೆಗೆ ಸಹಿ ಮಾಡಿರುತ್ತೇನೆ. ಆ ದಿನ ನನ್ನ ಜೊತೆ ಬೇರೆ ಯಾರೂ ಇರಲಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿ ಯಾವುದೇ ವಾಹನವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಲಾಗಿ ಅದರಲ್ಲಿರುವ ವಾಹನಗಳನ್ನು ನೋಡಿ ಗುರುತಿಸಿರುವುದಿಲ್ಲ. ನಾನು ನಿಪಿ–3 ಕ್ಕೆ ಸಹಿ ಮಾಡಿದಾಗ ಮಧ್ಯಾಹ್ನ 2.30 ಗಂಟೆ ಆಗಿತ್ತು.

**(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಬೇಕೆಂದು ಮನವಿ ಮಾಡಿದ್ದು ಸದರಿ ಮನವಿಯನ್ನು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ದಿನಾಂಕಃ 04.11.2019 ರಂದು ಕೊಳ್ಳೇಗಾಲ ಗ್ರಾಮಾಂತರ ಪೊಲೀಸ್ ಠಾಣಾ ಆವರಣದಲ್ಲಿ ನಾನು ನಿಪಿ–3 ದಾಖಲೆಗೆ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ಅಪಘಾತಕ್ಕೆ ಸಂಬಂಧಿಸಿದಂತೆ ಪೊಲೀಸರು ಕೆಎ 10 ಎಕ್ಸ್ 1859 ದ್ವಿಚಕ್ರ ವಾಹನವನ್ನು ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಜೊತೆ ಚಾಸಾ 7ರವರು ಸಹಾ ಇದ್ದರು ಎಂದರೆ ಸರಿಯಲ್ಲ. ನಿಪಿ–3ರಲ್ಲಿರುವ ಸಂಗತಿಗಳನ್ನು ನನಗೆ ಓದಿ ಹೇಳಿದ ನಂತರ ನಾನು ಹಾಗೂ ಚಾಸಾ 7ರವರು ನಿಪಿ–3 ಕ್ಕೆ ಸಹಿ ಮಾಡಿದ್ದೆವು ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ನನಗೆ ಎಲ್ಲಾ ಗೊತ್ತಿದ್ದರೂ ಸಹಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಇರುವುದಿಲ್ಲ ಎಂದು ನುಡಿಯುತ್ತಾರೆ.**

**ಮರು ವಿಚಾರಣೆಃ ಇರುವುದಿಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಕಾವ್ಯಶ್ರೀ. ಎಂ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ., ಕೊಳ್ಳೇಗಾಲ.